ವಸುಮತಿ ಉಡುಪ ಅವರದು ಮಲೆನಾಡಿನ ಮೃದುಭಾಷೆ. ಅವರೂರು ತೀರ್ಥಹಳ್ಳಿಯ ಕಿರಣಕೆರೆ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ', 'ಸಂಧಿಕಾಲ' ಮುಂತಾದ ಕಾದಂಬರಿಗಳು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ', 'ಸಂಕ್ರಮಣ', 'ಅಂತರಂಗದ ಪಿಸುನುಡಿ', 'ಬದುಕು ಮಾಯೆಯ ಮಾಟ' ಸೇರಿದಂತೆ 20ಕ್ಕೂ ಹೆಚ್ಚು ಕಥಾ ಸಂಕಲನಗಳು ಪ್ರಕಟವಾಗಿವೆ. ಅನೇಕ ಕಥೆಗಳು ಹಿಂದಿ, ತೆಲುಗು ಮುಂತಾದ ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆ. ನಾಟಕವಾಗಿ ರೂಪಾಂತರಗೊಂಡಿವೆ.

ವೈಮನಸ್ಯವಿಲ್ಲದ, ಕಿತ್ತಾಟವಿಲ್ಲದ ಕೂಡುಕುಟುಂಬ ಎನ್ನುವುದೊಂದಿದ್ದರೆ ಅದು ಈ ಮನೆ ಎಂದು ಜನ ಬೆಟ್ಟು ಮಾಡಿ ತೋರಿಸುವಷ್ಟು ವಾರಗಿತ್ತಿಯರು ಅನ್ಯೋನ್ಯತೆಯಿಂದಿದ್ದರು, ಒಡಹುಟ್ಟಿದವರಂತೆ.

ಕೆಲಸವನ್ನು ಮೈಮೇಲೆ ಎಳೆದುಕೊಂಡು ಮಾಡುವುದು ಕಮಲಾಕ್ಷಿಯ ಸ್ವಭಾವ. ವಾರಗಿತ್ತಿ ಗಿರಿಜಾ ಜೊತೆಗೂಡುತ್ತಿರಲಿಲ್ಲ ಅಂತೇನಲ್ಲ. 'ಇಂತಾ ಕೆಲಸ ಮಾಡಬೇಕು ಎನ್ನುವ ಕಮಲಾಕ್ಷಿಯ ಜವಾಬ್ದಾರಿಗೂ, 'ಮಾಡಿದರೂ ನಡೆಯುತ್ತದೆ, ಬಿಟ್ಟರೂ ನಡೆಯುತ್ತದೆ ಎನ್ನುವ ಗಿರಿಜನ ನಿರಾಳತೆಗೂ ವ್ಯತ್ಯಾಸವಿತ್ತು. ತಾನು ಮಾಡದಿದ್ದರೆ ಕಮಲಾಕ್ಷಿ ಆ ಕೆಲಸ ಪೂರೈಸುತ್ತಾಳೆ ಎನ್ನುವ ವಿಶ್ವಾಸ. ಒಂದು ಮನೆಯ ಹೆಂಗಹೆಂಗಸರಲ್ಲಿ ಹೆಚ್ಚುಪಕ್ಷ ಕಿಡಿ ಹತ್ತಿಕೊಳ್ಳುವುದು ಮಕ್ಕಳ ವಿಷಯದಲ್ಲಿ. ಹಾಲು ಮೊಸರಿನಲ್ಲಿ, ಬೆಣ್ಣೆ ತುಪ್ಪಗಳಲ್ಲಿ ತನ್ನ ಮಕ್ಕಳಿಗೂ, ಬೇರೆ ಮಕ್ಕಳಿಗೂ ಭೇದ ಮಾಡುತ್ತಾಳೆ ಎನ್ನುವ ಹುಳು ತಲೆ ಹೊಕ್ಕರೆ ಸಾಕು, ಅಲ್ಲಿಂದ ಶುರುವಾಗುತ್ತದೆ ವೈಮನಸ್ಯ. ಇನ್ನಿತರ ಸಣ್ಣಪುಟ್ಟ ಕಾರಣಗಳು ಸೇರಿಕೊಳ್ಳುತ್ತವೆ. ಈ ಮನೆಯಲ್ಲಿ ಅಂತಾ ಸಂದರ್ಭ ಸೃಷ್ಟಿಯಾಗಲಿಲ್ಲ. ಸೃಷ್ಟಿಯಾಗಲು ಗಿರಿಜಾ ಎಡೆ ಕೊಡಲಿಲ್ಲ. ತನ್ನ ಇಬ್ಬರು ಹೆಣ್ಣುಮಕ್ಕಳ ಜೊತೆ ಕಮಲಾಕ್ಷಿಯ ಮಕ್ಕಳಿಗೂ ತಾಯಿಯಾಗಿದ್ದಳು ಗಿರಿಜಾ. ಮುಂಚೇಕಡೆ ಜಗುಲಿಯಲ್ಲಿ ಮಕ್ಕಳನ್ನು ಕೂರಿಸಿಕೊಂಡು ಓದಿಸು, ಬರೆಸು, ಹೋಮ್‌ವರ್ಕ್ ಮಾಡಿಸು, ಇಂತವುಗಳನ್ನು ಸ್ವಸಂತೋಷದಿಂದ ನಿರ್ವಹಿಸುತ್ತಿದ್ದಳು.

"ನೀವು ಟೀಚರಾಗ್ಬೇಕಿತ್ತು ಅಕ್ಕಾ, ಸರ್ಕಾರಿ ಸಂಬಳ ತಗಂತಿದ್ರಿ. ನಂಗೆ ಕಲಿತಿದ್ದೆಲ್ಲಾ ಯಾವಾಗ್ಲೋ ಗುಡ್ಡ ಹತ್ತಿ ಹೋಗಿದೆ" ಬಿಸಿ ಕಾಫಿಯ ಲೋಟದೊಂದಿಗೆ ವಾರಗಿತ್ತಿ ಕೊಡಮಾಡುವ ಈ ಪ್ರಶಂಸೆಯನ್ನು ಸಗರ್ವದಿಂದ ಸ್ವೀಕರಿಸುತ್ತಿದ್ದಳು ಗಿರಿಜಾ. ಅವಳೇನು ಮಹಾ ಪಂಡಿತೆಯಲ್ಲ. ಆದರೆ, ಮಾಧ್ಯಮಿಕಶಾಲೆ ಮುಗಿಯುವವರೆಗಿನ ಓದು ಕಲಿಸಲು ತಕ್ಕಷ್ಟು ತಿಳಿವಳಿಕೆ ಅವಳಿಗಿತ್ತು. ಕಮಲಾಕ್ಷಿಗೂ ಇರಬಹುದಿತ್ತು ಎನ್ನುವುದು ಅಡುಗೆಮನೆಯ ಕತ್ತಲು ಕೋಣೆಯಲ್ಲಿ ಕಳೆದು ಹೋಗಿರುವ ಅವಳಿಗೆ ಮರೆತು ಹೋಗಿದೆ. ವಾರಗಿತ್ತಿಯಂತೆ ಅವಳೂ ಎಸ್ಸೆಸ್ಸೆಲ್ಸಿ. ಓದಿದ್ದರ ಬಳಕೆ ಇಲ್ಲದೆ ತುಕ್ಕು ಹಿಡಿದು ಹೋಗಿದೆ ಎನ್ನುವುದು ಇಬ್ಬರ ನಡುವಿನ ವ್ಯತ್ಯಾಸ. ಕಮಲಾಕ್ಷಿ ತನ್ನ ಮಕ್ಕಳನ್ನು ಅಕ್ಕನ ವಶಕ್ಕೊಪ್ಪಿಸಿ ನಿಶ್ಚಿಂತೆಯಿಂದಿದ್ದಳು. ಹೀಗೆ ಯಾವ ತಂಟೆ ತಕರಾರುಗಳೂ ಇಲ್ಲದೆ ಸಂಸಾರ ಸುಗಮವಾಗಿ ಸಾಗುತ್ತಿತ್ತು. ಗಂಡ ಇಲ್ಲ ಎನ್ನುವ ಕೊರತೆ ಬಿಟ್ಟರೆ ಆ ಮನೆಯಲ್ಲಿ ಕಮಲಾಕ್ಷಿ ಯಾವ ಕಾರಣಕ್ಕೂ ನಿಟ್ಟುಸಿರ್ಗರೆಯಬೇಕಾದ ಸ್ಥಿತಿ ಬಂದಿರಲಿಲ್ಲ. ಎಲ್ಲರನ್ನೂ ಸಮಾನ ದೃಷ್ಟಿಯಿಂದ ನೋಡುತ್ತಿದ್ದರು ಬಾವ. ವಿಶ್ವಾಸದಿಂದ ನಡೆಸಿಕೊಳ್ಳುತ್ತಿದ್ದಳು ವಾರಗಿತ್ತಿ.

***

ಕಮಲಾಕ್ಷಿಯ ಬಾವ ತಮ್ಮ ದೊಡ್ಡ ಮಗಳ ಮದುವೆ ಮಾಡಿದರು. ಮೈ ತುಂಬಾ ಚಿನ್ನ ಬಣ್ಣ ಹಾಕಿ ಪೇಟೆಯ ಛತ್ರದಲ್ಲಿ ಜಬರ್ದಸ್ತಾಗಿ ನಡೆಯಿತು ಮದುವೆ. ಅಳಿಯನಾದವನು ಪೇಟೆಯಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ. ಕೋಟಿಗಟ್ಟಲೆ ವ್ಯವಹಾರ. ಮನೆಕಡೆಯಲ್ಲೂ ಅನುಕೂಲಸ್ಥರು. ಆವಾಗಿನ್ನೂ ಡಿಪ್ಲೊಮಾ ಕೋರ್ಸಿಗೆ ಸೇರಿಕೊಂಡು, ಬಸ್ಸಲ್ಲಿ ನೇತಾಡಿಕೊಂಡು ಕಾಲೇಜಿಗೆ ಹೋಗಿ ಬರುತ್ತಿದ್ದ ಕರುಣಾಕರ ತಂಗಿಯ ಹತ್ತಿರ ಗುಸುಗುಟ್ಟಿದ್ದ, 'ನೋಡಿದ್ಯನೇ? ದೊಡ್ಡ ಮನುಷ್ಯರ ಸಂಬಂಧ ಬಂತು ಅಂತ ಹಿರಿಯಪ್ಪ ಅವರ ಸಮಕ್ಕೂ ಮದುವೆ ಮಾಡ್ಬಿಟ್ಟ. ಅದಕ್ಕೆಲ್ಲಾ ಇವನ ಹತ್ರ ದುಡ್ಡಿರುತ್ತೆ. ಕ್ಯಾಂಟೀನಲ್ಲಿ ಒಂದು ಪ್ಲೇಟು ತಿಂಡಿ ತಿನ್ನೋಕೆ ಕಾಸು ಬಿಚ್ಚಲ್ಲ ಅಂತಾನೆ.'